ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2023
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	24.03.2021.
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಲೋಕೋಪಯೋಗಿ ಇಲಾಖೆ

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ವಿಜಯಪುರ – ಕಲಬುರಗಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗುವುದೇ;	ವಿಜಯಪುರ – ಕಲ್ಬುರ್ಗಿ – ಹುಮ್ನಾಬಾದ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ 50 (ಹಳೇ ರಾ.ಹೆ.218) ಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.
ಆ)	ಪ್ರಸ್ತುತ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಕಾಮಗಾರಿ ಪೂರ್ತಿಗೊಂಡಿದೆ; ಉಳಿದಿರುವ ಕಾಮಗಾರಿ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಯೋಜನಾ ಅನುಷ್ಠಾನ ಘಟಕ, ಕಲ್ಬುರ್ಗಿಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಎಂದು ವರದಿಸಿರುತ್ತಾರೆ. ಮುಂದುವರೆದು, ಯೋಜನಾ ಅನುಷ್ಠಾನ ಘಟಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಕಲ್ಬುರ್ಗಿ ವ್ಯಾಪ್ತಿಗೊಳಪಟ್ಟಂತೆ ಕಲ್ಬುರ್ಗಿ–ಅಕ್ಕಲಕೋಟೆ–ಕರ್ನಾಟಕ /ತೆಲಂಗಾಣ ಗಡಿ ರಸ್ತೆ ಅಭಿವೃದ್ಧಿಗೆ ಹೊಸ ಗ್ರೀನ್ ಫೀಲ್ಡ್ ಪಂಕ್ತೀಕರಣವನ್ನು ಪ್ರಸ್ತಾಪಿಸಿದ್ದು, ಸದರಿ ರಸ್ತೆಯ ಉದ್ದ 75.00 ಕಿ.ಮೀ. ಇದ್ದು, ಕಲ್ಬುರ್ಗಿ ಜಿಲ್ಲೆಯ ಮೂಲಕ ಹಾದು ಹೋಗುತ್ತದೆ.

ಕಡತ ಸಂಖ್ಯೆ: ಲೋಇ 110 ಸಿಎನ್‌ಹೆಚ್ 2021 (ಇ)

(ಗೋವಿಂದ ಎಂ.ಕಾರಜೋಳ)
ಉಪ ಮುಖ್ಯಮಂತ್ರಿ,
ಲೋಕೋಪಯೋಗಿ ಇಲಾಖೆ